# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶೇಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:**

ನಿಬಂಧಕರು, ಕರ್ನಾಟಕ ಲೋಕಾಯುಕ್ತ ರವರ ಅ.ಸ.ಪ.ಸಂ/ಕಂಪ್ಲೇಂಟ್/ಉಪಲೋಕ್/ಬಿಜಿಎಂ/1748/2018/ಎಆರ್‌ಇ-6, ದಿನಾಂಕ:02.01.2020.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ರವರು ಶ್ರೀ ಚೇತನ್ ನಾರಾಯಣ ನಾಯಕ, ಜಿಲ್ಲಾ ಅಧ್ಯಕ್ಷರು, ಕರ್ನಾಟಕ ರಾಜ್ಯ ಜನಪರ ಹೋರಾಟ ಸಮಿತಿ ಹಿಚ್ಕಡ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ರವರು ಮಾನ್ಯ ಲೋಕಾಯುಕ್ತ ರವರಿಗೆ ನೀಡಿರುವ ದೂರಿನ ಕುರಿತು ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(3) ರ ಅಡಿಯಲ್ಲಿ ವರದಿಯಲ್ಲಿ ಸಲ್ಲಿಸಿರುತ್ತಾರೆ.

**ದೂರಿನ ಸಂಕ್ಷಿಪ್ತ ವಿವರಣೆ:**

ಈ ಪ್ರಕರಣದಲ್ಲಿ ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ರವಿರಾಜ್ ನಾರಾಯಣ ಎಂ., ಓಂಬಡ್ಸ್‌ಮನ್, ಶ್ರೀಶೈಲ ಸಗೇರಪ್ಪ ಜಂಬಗಿ, ಗುಣ ನಿಯಂತ್ರಣಾಧಿಕಾರಿ, ಶ್ರೀಮತಿ ಮಂಗಳ ನಾಯಕ, ಅಧ್ಯಕ್ಷರು, ಶ್ರೀ ಶಶಿಧರ್ ನಾಯಕ, ಅಧ್ಯಕ್ಷರು, ಶ್ರೀ ಪ್ರಕಾಶ್ ನಾಯಕ, ತಾಂತ್ರಿಕ ಸಹಾಯಕರು ಮತ್ತು ಶ್ರೀ ಲೋಕೇಶ್ ತರಿಮನಿ, ತಾಂತ್ರಿಕ ಸಹಾಯಕರು, ಶೇಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ ರವರುಗಳು ಬಾಸಗೋಡ ಸರ್ಕಾರಿ ಮಾಧ್ಯಮಿಕ ಶಾಲೆಯ ಕ್ರೀಡಾ ಮೈದಾನದ ಅಭಿವೃದ್ಧಿ ಕಾಮಗಾರಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಭಾಗಿಯಾಗಿರುತ್ತಾರೆ. ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ಪ್ರಕಾಶ್ ನಾಯಕ, ತಾಂತ್ರಿಕ ಸಹಾಯಕರು, ಶ್ರೀ ಲೋಕೇಶ್ ತರಿಮನಿ, ತಾಂತ್ರಿಕ ಸಹಾಯಕರು, ಈ ಪ್ರಕರಣದಲ್ಲಿ ಭಾಗಿಯಾಗಿದ್ದು, ಇವರುಗಳಲ್ಲಿ ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ಪ್ರಕಾಶ್ ನಾಯಕ, ತಾಂತ್ರಿಕ ಸಹಾಯಕರು, ಶ್ರೀ ಲೋಕೇಶ್ ತರಿಮನಿ, ತಾಂತ್ರಿಕ ಸಹಾಯಕರು ಇವರುಗಳು ಸರ್ಕಾರಿ ನೌಕರರಾಗಿದ್ದು, ಇವರುಗಳ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಹೆಚ್ಚಿನ ತನಿಖೆ ನಡೆಸಲು ಕೆ.ಸಿ.ಎಸ್. ಸಿ.ಸಿ.ಎ. ನಿಯಮಾವಳಿಗಳು 1957 ರ ನಿಯಮ 14(ಎ) ರನ್ವಯ ಉಪಲೋಕಾಯುಕ್ತಕ್ಕೆ ತನಿಖೆಗೆ ಒಳಪಡಿಸಲು ಹಾಗೂ ಶ್ರೀಮತಿ ಮಂಗಳ ನಾಯಕ, ಅಧ್ಯಕ್ಷರು, ಶ್ರೀ ಶಶಿಧರ್ ನಾಯಕ, ಅಧ್ಯಕ್ಷರು, ಶೇಟಗೇರಿ ಗ್ರಾಮ ಪಂಚಾಯಿತಿ, ಚುನಾಯಿತಿ ವ್ಯಕ್ತಿಗಳಾಗಿರುವುದರಿಂದ ಅವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸಬಹುದಾಗಿರುತ್ತದೆ. ಶ್ರೀ ರವಿರಾಜ್ ನಾರಾಯಣ್ ಎಂ. ಓಂಬಡ್ಸ್‌ಮನ್, ಶ್ರೀ ಶೈಲ ಸಗೇರಪ್ಪ ಜಂಬಗಿ, ಗುಣ ನಿಯಂತ್ರಣಾಧಿಕಾರಿ, ರವರುಗಳ ವಿರುದ್ಧ ಯಾವುದೇ ಕ್ರಮ ಇರುವುದಿಲ್ಲವೆಂದು ಮಾನ್ಯ ಲೋಕಾಯುಕ್ತ ರವರು ವರದಿ ಮಾಡಿರುತ್ತಾರೆ.

...2

ಮುಂದುವರೆದು ಮಾನ್ಯ ಲೋಕಾಯುಕ್ತರ ವರದಿಯಲ್ಲಿ ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ಪ್ರಕಾಶ್ ನಾಯಕ, ತಾಂತ್ರಿಕ ಸಹಾಯಕರು, ಶ್ರೀ ಲೋಕೇಶ್ ತರಿಮನಿ, ತಾಂತ್ರಿಕ ಸಹಾಯಕರು, ರವರುಗಳು 2013-14ನೇ ಸಾಲಿನ ಆಯವ್ಯಯದಲ್ಲಿ ಶೇಟಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಾಸಗೋಡ ಗ್ರಾಮದ ಸರ್ಕಾರಿ ಮಾಧ್ಯಮಿಕ ಶಾಲೆಯ ಕ್ರಿಡಾ ಮೈದಾನ ಅಭಿವೃದ್ಧಿಯ ಕಾಮಗಾರಿಗೆ ರೂ.2,000,00/-ಗಳ ಅನದಾನ ಮಂಜೂರಾಗಿದ್ದು, ಸದರಿ ಕಾಮಗಾರಿಯನ್ನು ಕಾರ್ಯಗತಗೊಳಿಸುವ ಸಂದರ್ಭದಲ್ಲಿ ಬಂತಹ ದೂರುಗಳ ಹಿನ್ನೆಲೆಯಲ್ಲಿ ಕಾಮಗಾರಿಗೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗಿದ್ದು, ದಿನಾಂಕ: 05.03.2014 ರಿಂದ 19.03.2014, 23.01.2015 ರಿಂದ 06.02.2015 ಮತ್ತು 09.11.2015 ರಲ್ಲಿ ಒಟ್ಟು ಮೂರು ಹಂತದಲ್ಲಿ ಕಾಮಗಾರಿ ನಿರ್ವಹಿಸಿದ್ದು, ನಿರ್ವಹಿಸಿದ ಕಾಮಗಾರಿಗಳು ಪಾರದರ್ಶಕತೆಯಾಗಿರದೇ ಇಲಾಖೆಯ ಮಾರ್ಗಸೂಚಿಯನ್ನು ಸರಿಯಾಗಿ ಪಾಲಿಸದೇ ಎಂ.ಬಿ. ಪುಸ್ತಕದಲ್ಲಿ ಕಾಮಗಾರಿ ಪ್ರಗತಿ ನಮೂದಿಸದಿರುವುದು ಕಾಮಗಾರಿಯ ನೈಜ್ಯತೆಯು ಅನುಮಾನಸ್ಪದವಾಗಿದ್ದು, ಮೂರು ಹಂತದಲ್ಲಿ ರೂ.1,59,753/-ಗಳನ್ನು ಖರ್ಚು ತೋರಿಸಿದ್ದು, ಶಾಲೆಯ ಮುಖ್ಯಾಧ್ಯಾಪಕರ ಗಮನಕ್ಕೆ ತರದೇ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘನೆಯಾಗಿರುವುದನ್ನು ಮನಗೊಂಡು ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ಪ್ರಕಾಶ್ ನಾಯಕ, ತಾಂತ್ರಿಕ ಸಹಾಯಕರು ಶ್ರೀ ಲೋಕೇಶ್ ತರಿಮನಿ, ತಾಂತ್ರಿಕ ಸಹಾಯಕರು, ರವರುಗಳು ಸರ್ಕಾರಿ ನೌಕರರಾಗಿದ್ದು, ಸರ್ಕಾರದ ಮಾರ್ಗಸೂಚನೆಯನ್ನು ಪಾಲನೆ ಮಾಡದೇ ಕಾಮಗಾರಿ ಪ್ರಗತಿ ಬಗ್ಗೆ, ಪಾರದರ್ಶಕತೆ ತೋರದೆ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿರುವುದರಿಂದ ಆರೋಪಿತ ಸರ್ಕಾರಿ ನೌಕರರುಗಳ ವಿರುದ್ಧದ ಆರೋಪಗಳ ಬಗ್ಗೆ ಸತ್ಯಾಸತ್ಯತೆಯನ್ನು ಕಂಡು ಕೊಳ್ಳಲು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1957 ರ ನಿಯಮ 14(ಎ) ರಡಿ ಹೆಚ್ಚಿನ ತನಿಖೆ ನಡೆಸಲು ಪ್ರಕರಣವನ್ನು ಉಪಲೋಕಾಯುಕ್ತಕ್ಕೆ ವಹಿಸಬೇಕೆಂದು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಲಾಗಿ, ಈ ಪ್ರಕರಣದಲ್ಲಿ ಒಳಗೊಂಡಿರುವ ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ಪ್ರಕಾಶ್ ನಾಯಕ, ತಾಂತ್ರಿಕ ಸಹಾಯಕರು, ಶ್ರೀ ಲೋಕೇಶ್ ತರಿಮನಿ, ತಾಂತ್ರಿಕ ಸಹಾಯಕರು ರವರುಗಳ ವಿರುದ್ಧದ ಅರೋಪಗಳ ಬಗ್ಗೆ ಲೋಕಾಯುಕ್ತದ ಶಿಫಾರಸ್ಸಿನಂತೆ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14(ಎ) ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ.

ಅದರಂತೆ ಈ ಕೆಳಕಂಡ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/38/ಗ್ರಾಪಂಕಾ/2020**

**ಬೆಂಗಳೂರು, ದಿನಾಂಕ:25-02-2020.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶ್ರೀ ಪ್ರಕಾಶ್ ನಾಯಕ, ತಾಂತ್ರಿಕ ಸಹಾಯಕರು ಮತ್ತು ಶ್ರೀ ಲೋಕೇಶ್ ತರಿಮನಿ, ತಾಂತ್ರಿಕ ಸಹಾಯಕರು, ಇವರುಗಳ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14(ಎ) ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಿದೆ.

..3

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 25/2/2020
(ನವೀನ್‌ಕುಮಾರ್ ಬಿ.)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

25.2.2020

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಮಾನ್ಯ ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಮೂಲ ದಾಖಲೆಗಳನ್ನು ಇದರೊಂದಿಗೆ ಹಿಂದಿರುಗಿಸಿದೆ. ಪುಟ ಸಂಖ್ಯೆ: 1 ರಿಂದ 800).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಉತ್ತರ ಕನ್ನಡ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಅಂಕೋಲಾ, ಉತ್ತರ ಕನ್ನಡ ಜಿಲ್ಲೆ.
6. ಶ್ರೀಮತಿ ಮಾನವಿಕ ನಾಯಕ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಶೇಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
7. ಶ್ರೀ ಪ್ರಕಾಶ್ ನಾಯಕ, ತಾಂತ್ರಿಕ ಸಹಾಯಕರು, ಶೇಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
8. ಶ್ರೀ ಲೋಕೇಶ್ ತರಿಮನಿ, ತಾಂತ್ರಿಕ ಸಹಾಯಕರು, ಶೇಟಗೇರಿ ಗ್ರಾಮ ಪಂಚಾಯಿತಿ, ಅಂಕೋಲಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
10. ಗಣಕ ಕೋಶ.